# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

"ಗ್ರಾಮೀಣಾಭಿವೃದ್ಧಿ ಭವನ"4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ:ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಎಸ್‌ಕ್ಯೂಎಂ ಎಂಪ್ಯಾನಲ್‌ಮೆಂಟ್/2017–18 ದಿನಾಂಕ: 5 /2 /2018

## ಪತ್ರಿಕೆ ಪ್ರಕಟಣೆ

**ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್(SQM) ಗಳ Empanelment ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದೆ**

ಕೆಆರ್‌ಐಡಿಎಲ್ ನಿಂದ ನಿರ್ವಹಿಸಲಾಗುತ್ತಿರುವ ವಿವಿಧ ಕಾಮಗಾರಿಗಳಲ್ಲಿ ಗುಣನಿಯಂತ್ರಣ ವ್ಯವಸ್ಥೆಯ ಸಂಬಂಧ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ/ ರಕ್ಷಣಾಸೇವೆ/ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಿಂದ ನಿವೃತ್ತ ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರುಗಳಿಂದ & ಇಂಜಿನಿಯರಿಂಗ್ ಕಾಲೇಜುಗಳ ಪ್ರೊಫೆಸರ್‌ಗಳಿಂದ ಮೂರನೇ ಹಂತದಲ್ಲಿ ತಪಾಸಣೆ ಸಂಬಂಧ ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ಗಳ ಎಂಪ್ಯಾನಲ್‌ಮೆಂಟ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಎಂಪ್ಯಾನಲ್‌ಮೆಂಟ್‌ನಲ್ಲಿ ಆಸಕ್ತಿ ಹೊಂದಿರುವವರು ಕೆ.ಆರ್.ಐ.ಡಿ.ಎಲ್ ವೆಬ್‌ಸೈಟ್‌ನಲ್ಲಿ: www.kridl.org ನಿಂದ ನಿಗದಿತ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಹಾಗೂ ಇತರೆ ವಿವರಗಳನ್ನು ಗಮನಿಸಿ, ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ:5 / 3 /2018 ರ 4.00 ಘಂಟೆಯೊಳಗಾಗಿ ಕೆ.ಆರ್.ಐ.ಡಿ.ಎಲ್ ಕೇಂದ್ರ ಕಛೇರಿಗೆ ತಲುಪುವಂತೆ ಸಲ್ಲಿಸುವುದು. ನಂತರದಲ್ಲಿ ಬರುವಂತಹ ಅರ್ಜಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಪರಿಗಣಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:**

ಮುಖ್ಯ ಅಭಿಯಂತರರು (ಉತ್ತರ), ಕೆಆರ್‌ಐಡಿಎಲ್, ಬೆಂಗಳೂರು.
ದೂರವಾಣಿ:080–28015605, 28015647

ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್,ಬೆಂಗಳೂರು.

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

"ಗ್ರಾಮೀಣಾಭಿವೃದ್ಧಿ ಭವನ"4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ:ಕೆಆರ್‌ಐಡಿಎಲ್/ಕಾಮಗಾರಿ/ಡಿಕ್ಯೂಎಂ ಎಂಪ್ಯಾನಲ್‌ಮೆಂಟ್/2017-18 ದಿನಾಂಕ: 5 / 2 /2018

## ಪತ್ರಿಕ ಪ್ರಕಟಣೆ

### ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್(SQM) ಗಳ Empanelment ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದೆ

ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ ವತಿಯಿಂದ ಕಟ್ಟಡ, ರಸ್ತೆ, ನೀರು ಸರಬರಾಜು, ವಿದ್ಯುತ್ ಚಕ್ತಿ ಒಳಗೊಂಡಂತಹ, ಹಲವಾರು ಯೋಜನೆಯ ಕಾಮಗಾರಿಗಳನ್ನು ಸರ್ಕಾರ ವಿವಿಧ ಇಲಾಖೆಗಳಿಂದ ವಹಿಸಿಕೊಂಡು ನಿರ್ವಹಿಸಲಾಗುತ್ತಿದೆ.

ಸಂಸ್ಥೆಯಲ್ಲಿ ಮೂರು ಹಂತದ ಗುಣನಿಯಂತ್ರಣ ವ್ಯವಸ್ಥೆ ಹೊಂದಿದ್ದು, ಮೂರನೇ ಹಂತದಲ್ಲಿ ಕಾಮಗಾರಿಗಳ ಪರಿವೀಕ್ಷಣೆ ಮಾಡಲು ರಾಜ್ಯ ಮಟ್ಟದ ಗುಣನಿಯಂತ್ರಕರ ಅರ್ಜಿಗಳನ್ನು ಕರೆಯಲಾಗಿದ್ದು, ಭಾಗವಹಿಸುವ ಆಸಕ್ತರು ನಿಯಮ ಮತ್ತು ನಿಭಂದನೆಗಳು ಪಾಲಿಸಬೇಕಾದ ವಿವರ ಈ ಕೆಳಗಿನಂತಿವೆ.

1. ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ಗಳು ಸಾರ್ವಜನಿಕ ಸೇವೆಯನ್ನು ಮಾಡಲು ಉತ್ಸುಕರಾಗಿದ್ದು, ಸಮಾಜದ ಏಳಿಗೆಗಾಗಿ ಶ್ರಮಿಸುವವರಾಗಿರಬೇಕು ಹಾಗೂ ದೈಹಿಕವಾಗಿ ಆರೋಗ್ಯವಂತರಾಗಿರಬೇಕು.
2. ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ಗಳನ್ನು ಆಯ್ಕೆ ಸಮಿತಿಯಿಂದ ತಾಂತ್ರಿಕ ಮಾನದಂಡಗಳನ್ವಯ ಆಯ್ಕೆ ಮಾಡಲಾಗುವುದು.
3. ಗುಣ ನಿಯಂತ್ರಣ ಮಾನಿಟರ್‌ಗಳು ವಿವಿಧ ಅವದಿಯಲ್ಲಿ ನಿಯೋಜಿಸಲ್ಪಟ್ಟ ಜಿಲ್ಲೆಗಳಿಗೆ ತೆರಳಿ ಕಾಮಗಾರಿಗಳನ್ನು ಮಾರ್ಗಸೂಚಿಯಂತೆ ಪರಿವೀಕ್ಷಿಸಿ ನಿಗದಿತ ನಮೂನೆಯಲ್ಲಿ ವರದಿ ಸಲ್ಲಿಸಬೇಕಾಗಿರುತ್ತದೆ.
4. 68 ವರ್ಷಕ್ಕಿಂತ ಕಡಿಮೆ ಇರುವ ಅರ್ಹ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಗುಣ ನಿಯಂತ್ರಣ ಮಾನಿಟರ್‌ಗಳು 70 ವರ್ಷ ತುಂಬುವವರೆಗೂ ಕಾರ್ಯ ನಿರ್ವಹಿಸಬಹುದಾಗಿರುತ್ತದೆ. ಗುಣನಿಯಂತ್ರಣ ಮಾನಿಟರ್‌ಗಳ ಪರಿವೀಕ್ಷಣಾ ವರದಿಗಳನ್ನು 6 ತಿಂಗಳಿಗೊಮ್ಮೆ ಮೌಲ್ಯಮಾಪನ ನಡೆಸಲಾಗುವುದು.
5. ಗರಿಷ್ಠ ವಯೋಮಿತಿ ಮೀರಿದ ನಂತರ ಅಥವಾ ಅಸಮರ್ಪಕ ಕಾರ್ಯನಿರ್ವಹಣೆ ಕಂಡುಬಂದಲ್ಲಿ ಅಂತಹ ಮಾನಿಟರ್‌ಗಳನ್ನು ಪ್ಯಾನಲ್‌ನಿಂದ ಕೈಬಿಡಲಾಗುವುದು.
6. Rural Roads/Highways/Bridges/Culverts/Water Supply ಇತರೆ Civil ಕಾಮಗಾರಿಗಳ ನಿರ್ಮಾಣದಲ್ಲಿ ಅನುಭವ ಹಾಗೂ Construction Materials/Geo-Technical/Structural ಬಗ್ಗೆ ಮಾನಿಟರ್‌ಗಳು ಸೂಕ್ತವಾದ ಮಾಹಿತಿ ಹೊಂದಿರಬೇಕು
7. ಗುಣನಿಯಂತ್ರಣ ಮಾನಿಟರ್‌ಗಳು
   - State Government/Central Government/Defence Service/Border Roads Organization/Central and state Public sector under takings ಗಳಿಂದ ನಿವೃತ್ತರಾದ/ಸೇವೆ ಸಲ್ಲಿಸಿದ ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರುಗಳಾಗಿರಬೇಕು
   - ಪ್ರಾಧ್ಯಾಪಕರು, ಸಿವಿಲ್ ಇಂಜಿನಿಯರಿಂಗ್ ವಿದ್ಯಾಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದವರಾಗಿರತಕ್ಕದ್ದು
8. ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ಗಳಿಗೆ ಪ್ರತಿ ಪರಿವೀಕ್ಷಣಾ ಪ್ರವಾಸದ ಗೌರವಧನ ರೂ.2500 ಪ್ರತಿ ದಿನಕ್ಕೆ ಹಾಗೂ ದಿನ ಭತ್ಯೆ ರೂ.250.00 ಮತ್ತು ಪ್ರಾಸಂಗಿಕ ಭತ್ಯೆ ರೂ.250.00(Mileage allowance), ವರಧೀಕರಣ ಭತ್ಯೆ ರೂ.250.00 ಗಳನ್ನು ಪ್ರತೀ ಪ್ರವಾಸಕ್ಕೆ ಹಾಗೂ ಸಾಮಾನ್ಯ ಸಾರಿಗೆ/ಎ.ಸಿ ಬಸ್ಸು ಸಾರಿಗೆ/ಎ.ಸಿ ತ್ರಿಟೈರ್ ರೈಲು ಪ್ರಯಾಣದ ವಾಸ್ತವಿಕ ಭತ್ಯೆಗಳನ್ನು ಮಾತ್ರ ನೀಡಲಾಗುವುದು ಮತ್ತು ವಸತಿ ವ್ಯವಸ್ಥೆಯನ್ನು IB ಕಟ್ಟಡಗಳಲ್ಲಿ/ ಹೋಟೆಲ್‌ಗಳಲ್ಲಿ ಪ್ರಾಜೆಕ್ಟ್ ವತಿಯಿಂದ ಕಲ್ಪಿಸಿಕೊಡಲಾಗುವುದು. ಕೇಂದ್ರ ಕಛೇರಿಯಲ್ಲಿ ಸಭೆಗಳಿಗೆ ಹಾಜರಿದ್ದಲ್ಲಿ ರೂ.2500 ಗೌರವಧನ ನೀಡಲಾಗುವುದು.
9. ಈಗಾಗಲೇ ಕೆ.ಆರ್.ಐ.ಡಿ.ಎಲ್. ನಲ್ಲಿ Empanel ಆಗಿರುವ ರಾಜ್ಯ ಮಟ್ಟದ ಗುಣನಿಯಂತ್ರಣ ಮಾನಿಟರ್‌ರವರು ಸಹ ಪುನಃ ಹೊಸದಾಗಿ ಅರ್ಜಿ ಸಲ್ಲಿಸುವುದು.
10. ಅರ್ಜಿಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಗೆ ಇರುತ್ತದೆ.
11. ಗುಣನಿಯಂತ್ರಣ ಮಾನಿಟರ್‌ಗಳು
    - ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು (ನಿವೃತ್ತ) ಇವರು ನಿವೃತ್ತಿ ಹೊಂದಿದ ಇಲಾಖೆಯಿಂದ ಯಾವುದೆ ಇಲಾಖೆ ವಿಚಾರಣೆ ಇಲ್ಲದಿರುವ ಕುರಿತು ಪ್ರಮಾಣ ಪತ್ರ ಸಲ್ಲಿಸುವುದು,
    - ತಾಂತ್ರಿಕ ವಿದ್ಯಾ ಸಂಸ್ಥೆಯ ಪ್ರಾಧ್ಯಾಪಕರು ಸಂಬಂಧಿಸಿದ ತಾಂತ್ರಿಕ ಕಾಲೇಜ್ ನಿಂದ ನಿರಾಪೇಕ್ಷಣ ಪ್ರಮಾಣ ಪತ್ರ ಸಲ್ಲಿಸುವುದು

ಸಂಸ್ಥೆಯ ವೆಬ್ ಸೈಟ್‌ನಲ್ಲಿ ನೀಡಿರುವ ನಮೂನೆಯಲ್ಲಿ ಕ.ಗ್ರಾ.ಮೂ.ಸೌ.ನಿ. ಸಂಸ್ಥೆ ಬೆಂಗಳೂರುಗೆ ದಿ: 5 / 3 /2018 ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ನಂತರ ಬರುವ ಅರ್ಜಿಗಳನ್ನು ಮುಂದಿನ ದಿನಗಳಲ್ಲಿ ಪರಿಗಣಿಸಲಾಗದು. ಹೆಚ್ಚಿನ ವಿವರಗಳು ಅವಶ್ಯವಿದ್ದಲ್ಲಿ ಈ ಸಂಸ್ಥೆಯ www.kridl.org Website ಮೂಲಕ ಪಡೆಯಬಹುದಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್ ಬೆಂಗಳೂರು.

# ರಾಜ್ಯ ಮಟ್ಟದ ಗುಣನಿಯಂತ್ರಕರ ನೋಂದಣಿಗಾಗಿ ಅರ್ಜಿ ನಮೂನೆ

ಇತ್ತೀಚಿನ ಪಾಸ್‌ಪೋರ್ಟ್ ಭಾವ ಚಿತ್ರ ಅಂಟಿಸುವದು

1. ಅರ್ಜಿದಾರರ ಹೆಸರು :
2. ತಂದೆ/ಗಂಡ ರವರ ಹೆಸರು :
3. ಈಗಿನ ವಿಳಾಸ :
   (ಪುರಾವೆ ಲಗತ್ತಿಸುವುದು)

4. ಖಾಯಂ ವಿಳಾಸ :
   (ಪುರಾವೆ ಲಗತ್ತಿಸುವುದು)

5. ಹುಟ್ಟಿದ ದಿನಾಂಕ ಹಾಗೂ ವಯಸ್ಸು :

6. ವಿದ್ಯಾರ್ಹತೆ (ಪುರಾವೆ ಲಗತ್ತು) :
7. ಸೇವೆಗೆ ಸೇರಿದ ದಿನಾಂಕ ಮತ್ತು ಹುದ್ದೆ :
8. ನಿವೃತ್ತಿ ಪೂರ್ವದಲ್ಲಿ ಹೊಂದಿದ್ದ ಹುದ್ದೆ :
9. ನಿವೃತ್ತಿಯ ದಿನಾಂಕ :
10. ದೂರವಾಣಿ ಸಂಖ್ಯೆ :
    ಇ–ಮೇಲ್ :
11. ಪ್ಯಾನ್ ಕಾರ್ಡ್ ಸಂಖ್ಯೆ :
12. ಗುಣನಿಯಂತ್ರಣದ ಬಗ್ಗೆ ಗುರಿ ಮತ್ತು ದೃಷ್ಟಿಕೋನ :
    (50 ಪದಗಳು ಮೀರದಂತೆ)

13. ಅನುಭವದ ಬಗ್ಗೆ ವಿವರ

| ಕ್ರ. ಸಂ. | ಇಲಾಖೆ | ಹುದ್ದೆ | ನಿಗಧಿಪಡಿಸಿದ್ದ ಕರ್ತವ್ಯಗಳು | ಅವಧಿ | ವಿವಿಧ ಹುದ್ದೆಗಳಲ್ಲಿನ ವಿವರಗಳು |
|---|---|---|---|---|---|
| | | | | | |

(ಅಗತ್ಯತೆಯಿದ್ದಲ್ಲಿ ಹೆಚ್ಚುವರಿ ವಿವರಗಳನ್ನು ಇದರೊಂದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು)

1. ಶ್ರೀ ________________ ಆದ ನಾನು ಪ್ರಮಾಣೀಕರಿಸುವುದೇನೆಂದರೆ ಮೇಲೆ ನೀಡಿರುವ ಎಲ್ಲಾ ವಿವರಗಳನ್ನು ನನ್ನ ತಿಳವಳಿಕೆ ಹಾಗೂ ನಂಬಿಕೆಯಂತೆ ಸತ್ಯವಾಗಿರುತ್ತವೆ. ಒಂದು ವೇಳೆ ನಾನು ತಪ್ಪು ಮಾಹಿತಿಗಳನ್ನು ಸರ್ಕಾರ/ಸಂಸ್ಥೆಗೆ ನೀಡಿದ್ದಲ್ಲಿ ಕಾನೂನು ರೀತಿಯ ಕ್ರಮಕ್ಕೆ ಒಳಪಡುತ್ತೇನೆಂಬ ಅರಿವು ನನಗೆ ಇರುತ್ತದೆ.
2. ಶ್ರೀ________________ ಆದ ನಾನು ಪ್ರಮಾಣೀಕರಿಸುವುದೇನೆಂದರೆ ನನ್ನ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಹಾಗೂ ನನ್ನಿಂದ ಸೇವೆ ಸಲ್ಲಿಸಿದ ಇಲಾಖೆ/ತಾಂತ್ರಿಕ ವಿದ್ಯಾಸಂಸ್ಥೆಗಳಿಗೆ ಯಾವುದೇ ಬಾಕಿ ನೀಡಬೇಕಾಗಿರುವುಧಿಲ್ಲ. (ಇಲಾಖೆಯಿಂದ ನೀಡಿರುವ ಬೇಬಾಕಿ ಪ್ರಮಾಣ ಪತ್ರ ಲಗತ್ತಿಸುವುದು.)

**ದಿನಾಂಕ:**

**ಸ್ಥಳ:** **ಅರ್ಜಿದಾರರ ಸಹಿ**